ಉಪಯೋಗಿಸಲಾಗುತ್ತಿದೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಘಟಕಗಳಿಗೆ ಇದು ತಲುಪುತ್ತಿಲ್ಲ ಎಂದು ನನಗೆ ಬಹಳಷ್ಟು ದೂರುಗಳು ಬಂದಿವೆ. ಇದರ ಬಗ್ಗೆ ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಡಾ: ಎ.ಬಿ.ಮಾಲಕರೆಡ್ಡಿ: ಅದು ತಾಲ್ಲೂಕು ಮಟ್ಟದಲ್ಲಿ ಮಾಡತಕ್ಕಂಥ ಕಾರ್ಯಕ್ರಮವಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವ ವೈದ್ಯರು ಮತ್ತು ತಾಲ್ಲೂಕು ಮಟ್ಟದಲ್ಲಿ ಕೆಲಸ ಮಾಡುತ್ತಿರುವ ವೈದ್ಯರು ಮತ್ತು ಮಹಿಳಾ ವೈದ್ಯರು, ಈ ಮೂವರು ಜೊತೆಗೂಡಿ ಐದಾರು ಗ್ರಾಮಗಳ ನಡುವೆ ಇರುವ ಸಬ್‌ಸೆಂಟರ್‌ನಲ್ಲಿ ಹೋಗಿ ಕ್ಯಾಂಪ್ ಮಾಡುತ್ತಾರೆ, ಅಲ್ಲಿಗೆ ಹಳದಿ ಕಾರ್ಡ್ ಹೊಂದಿರುವವರು ಬಂದು ತಮಗೆ ಏನಾದರೂ ಖಾಯಿಲೆ ಇದ್ದರೆ ತೋರಿಸಿಕೊಂಡು ಹೋಗುತ್ತಾರೆ. ಇದು ಜನರ ಮಧ್ಯದಲ್ಲಿ ಹೋಗಿ ಮಾಡುವಂತಹ ಕಾರ್ಯಕ್ರಮ. ತಾಲ್ಲೂಕು ಮಟ್ಟದಲ್ಲಿ ಕುಳಿತು ದುರುಪಯೋಗ ಮಾಡುವಂಥ ಕಾರ್ಯಕ್ರಮವಲ್ಲ.

ಅಧ್ಯಕ್ಷರು: ಮಾನ್ಯ ಚನ್ನಿಗಪ್ಪನವರೇ ನಿಮ್ಮ ಪ್ರಶ್ನೆಗೆ ಸರ್ಕಾರದವರು ಸಮಯ ಕೇಳಿರುವುದರಿಂದ ಮುಂದಿನ ವಾರದಲ್ಲಿ ತೆಗೆದುಕೊಳ್ಳೋಣ.

ಶ್ರೀ ಸಿ.ಚನ್ನಿಗಪ್ಪ: ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ, ಹಣದ ದುರುಪಯೋಗವಾಗಿರುವ ಪ್ರಶ್ನೆಗೆ ಸರ್ಕಾರ ಸಮಯ ಕೇಳಿದರೆ ಹೇಗೆ? ಹಾಗಾದರೆ ಇದಕ್ಕೆ ಯಾವತ್ತು ನಮಗೆ ಉತ್ತರ ಕೊಡಿಸುತ್ತೀರಿ?

ಅಧ್ಯಕ್ಷರು: ಮಾಹಿತಿ ತರಿಸಬೇಕು ಎನ್ನುವ ಉದ್ದೇಶದಿಂದ ಸರ್ಕಾರ ಸಮಯ ಕೇಳಿದೆ, ನಿಮಗೆ ಬುಧವಾರದ ದಿವಸ ಇದಕ್ಕೆ ಉತ್ತರ ಕೊಡಿಸೋಣ.

ಶಿಕ್ಷಕರಿಗೆ ಪ್ರಶಸ್ತಿ ನೀಡುವ ಬಗ್ಗೆ.

307(2955)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಉನ್ನತ ಶಿಕ್ಷಣಕ್ಕಾಗಿ 2000-2001ರಲ್ಲಿ ನಿಗದಿಪಡಿಸಿರುವ ಹಣವೆಷ್ಟು?

ಅ) ರಾಜ್ಯದಲ್ಲಿ ಸರ್ಕಾರಿ ಮತ್ತು ಅನುದಾನಿತ ಪದವಿ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರ ಸಂಖ್ಯೆ ಎಷ್ಟು?

ಇ) ರಾಜ್ಯದಲ್ಲಿನ ಪದವಿ ಕಾಲೇಜುಗಳಲ್ಲಿ ಉತ್ತಮವಾಗಿ ಸೇವೆ ಸಲ್ಲಿಸುವ ಶಿಕ್ಷಕರಿಗೆ ಪ್ರಶಸ್ತಿ ನೀಡುವ ಯೋಜನೆ ಸರ್ಕಾರದ ಮುಂದೆ ಇದೆಯೆ?

ಈ) ಹಾಗಿದ್ದಲ್ಲಿ ಪೂರ್ಣ ವಿವರ ಒದಗಿಸುವುದು;

ಡಾ. ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು):

ಅ) ಯೋಜನೆಯಡಿ ರೂ. 2869.00 ಲಕ್ಷಗಳು

ಯೋಜನೇತರಡಿ ರೂ. 68760.24 ಲಕ್ಷಗಳು

ಆ) ಸರ್ಕಾರಿ ಕಾಲೇಜುಗಳ ಶಿಕ್ಷಕರ ಸಂಖ್ಯೆ - 3193

ಖಾಸಗಿ ಅನುದಾನಿತ ಕಾಲೇಜುಗಳ ಶಿಕ್ಷಕರ ಸಂಖ್ಯೆ - 8116

ಇ) ಹೌದು, ಈಗಾಗಲೇ ನೀಡಲಾಗುತ್ತಿದೆ.

ಈ) ಪದವಿ ಕಾಲೇಜುಗಳಲ್ಲಿ ಉತ್ತಮವಾಗಿ ಸೇವೆ ಸಲ್ಲಿಸುವ ಶಿಕ್ಷಕರಿಗೆ ಪ್ರಶಸ್ತಿ ನೀಡುವ ಯೋಜನೆಯನ್ನು 1995-96ರಲ್ಲಿ ಪ್ರಾರಂಭಿಸಿದ್ದು, ಸದರಿ ವರ್ಷದಲ್ಲಿ 5 ಪ್ರಶಸ್ತಿಗಳನ್ನು ನೀಡಲಾಯಿತು. 1996-97 ಮತ್ತು 97-98ನೇ ಸಾಲಿಗೆ ಒಟ್ಟು 14 ಪ್ರಶಸ್ತಿಗಳನ್ನು ದಿನಾಂಕ:20-7-99ರಂದು ನೀಡಲಾಯಿತು. 2000-2001ನೇ ಸಾಲಿನಲ್ಲಿ 14 ಪ್ರಶಸ್ತಿಗಳನ್ನು ನೀಡಲು ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಮಾನ್ಯ ಅಧ್ಯಕ್ಷರೆ, 1999-2000ರಲ್ಲಿ ಉನ್ನತ ಶಿಕ್ಷಣಕ್ಕೆ ಒದಗಿಸಿರುವ ಹಣವೆಷ್ಟು? ಹಾಗೂ ಖರ್ಚು ಮಾಡಿದ ಹಣವೆಷ್ಟು?

ಡಾ: ಜಿ. ಪರಮೇಶ್ವರ್: ಈಗಾಗಲೇ ತಾವು ಕೇಳಿರುವ ಪ್ರಶ್ನೆ(ಅ)ಕ್ಕೆ ಉತ್ತರ ನೀಡಿದ್ದೇನೆ. ಇದು ಕಳೆದ ವರ್ಷದ್ದಲ್ಲ, ತಾವು ಕೇಳಿರುವುದು ಈ ವರ್ಷದ ಮಾಹಿತಿ ಅದಕ್ಕೆ ಉತ್ತರ ನೀಡಿದ್ದೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಈ ವರ್ಷ ಒದಗಿಸಿರುವ ಹಣ ಕಳೆದ ವರ್ಷಕ್ಕಿಂತ ಕಡಿಮೆಯಾಗಿದೆ ಎಂದು ಎಲ್ಲರೂ ಹೇಳುತ್ತಿರುವುದರಿಂದ ಇದರ ಬಗ್ಗೆ ತಾವು ವಿವರಣೆ ಕೊಡಬೇಕು.

ಡಾ: ಜಿ. ಪರಮೇಶ್ವರ್: ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಬಜೆಟ್‌ನಲ್ಲಿ ಉನ್ನತ ಶಿಕ್ಷಣಕ್ಕೆ ಸುಮಾರು 15 ಪರ್ಸೆಂಟ್ ಅಲೋಕೇಷನ್ ಕಡಿಮೆ

ಮಾಡಬೇಕು ಎಂದು ಈಗಾಗಲೇ ಬಜೆಟ್‌ನಲ್ಲಿ ಘೋಷಿಸಿದ್ದಾರೆ. ಇದಕ್ಕೇನು ಕಾರಣವೆಂದರೆ, ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಕಾಲೇಜುಗಳಲ್ಲಿ ತೆಗೆದುಕೊಳ್ಳುತ್ತಿರುವ ಫೀಜ್ ಬಹಳಷ್ಟು ಕಡಿಮೆ ಇರುವುದರಿಂದ ಉನ್ನತ ಶಿಕ್ಷಣಕ್ಕೆ ಹೊಸ ರೂಪವನ್ನು ಕೊಡಬೇಕು ಎನ್ನುವ ಉದ್ದೇಶದಿಂದ ಈ ತೀರ್ಮಾನವನ್ನು ಸರ್ಕಾರದಲ್ಲಿ ನಾವು ತೆಗೆದುಕೊಂಡಿದ್ದೇವೆಂದು ಮಾನ್ಯ ಸದಸ್ಯರಿಗೆ ತಿಳಿಸಲಿಚ್ಚಿಸುತ್ತೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಇವತ್ತು ಎಲ್ಲಾ ಭಾಗಗಳಲ್ಲೂ ಉನ್ನತ ಶಿಕ್ಷಣದಲ್ಲಿ ಅನೇಕ ವಿಭಾಗಗಳನ್ನು ಪ್ರಾರಂಭಿಸುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಸಂದರ್ಭ ಹೀಗಿರುವಾಗ ಸರ್ಕಾರ ಉನ್ನತ ಶಿಕ್ಷಣಕ್ಕೆ 15 ಪರ್ಸೆಂಟ್ ಹಣ ಕಡಿಮೆ ಮಾಡಲಾಗಿದೆ ಎಂದು ಹೇಳಿದರೆ ಹೇಗೆ? ಇದು ಸರಿಯೇ ಎಂದು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಡಾ: ಜಿ.ಪರಮೇಶ್ವರ್: ಇಡೀ ಪ್ರಪಂಚದಲ್ಲಿ ಇವತ್ತು ಉನ್ನತ ಶಿಕ್ಷಣ ಒಂದು ಬದಲಾವಣೆಯನ್ನು ಹೊಂದುತ್ತಿದೆ. ವಿಶ್ವವಿದ್ಯಾನಿಲಯದವರು ಸೆಲ್ಫ್ ಫೈನಾನ್ಸಿಂಗ್ ಸ್ಕೀಮ್ ಎಂದು ಮಾಡಿಕೊಂಡು ತಮ್ಮ ಹಣವನ್ನು ತಾವು ಸ್ವಲ್ಪ ಮಟ್ಟಿಗೆ ಒದಗಿಸಿಕೊಳ್ಳಬೇಕು ಎಂದು ಇಡೀ ಪ್ರಪಂಚದಲ್ಲಿರುವ ಎಲ್ಲಾ ವಿಶ್ವವಿದ್ಯಾನಿಲಯಗಳು ಮಾಡುತ್ತಿವೆ. ನಮ್ಮ ದೇಶದಲ್ಲೂ ಕೂಡ ಇಂಡಸ್ಟ್ರಿ ಹಾಗೂ ವಿಶ್ವವಿದ್ಯಾನಿಲಯಗಳ ಇಂಟರ್‌ಆ್ಯಕ್ಷನ್ ಎಂದು ನಾವೇನು ಕರೆಯುತ್ತೇವೆ, ವಿಶ್ವವಿದ್ಯಾನಿಲಯಗಳಲ್ಲಿ ಇಂಡಸ್ಟ್ರಿಗಳು ಕೂಡ ಭಾಗವಹಿಸಿ, ಒಳ್ಳೊಳ್ಳೆಯ ಸ್ಕೀಮ್‌ಗಳನ್ನು ಸಾದರಪಡಿಸಬೇಕು.

ಹಾಗೂ ಈ ರೀತಿ ಸಾದರಪಡಿಸುವ ಸ್ಕೀಮ್‌ಗಳಿಗೆ ಹಣವನ್ನು ಒದಗಿಸಿ ಕೊಟ್ಟು ಮುಂದೆ ಬರಬೇಕು ಎನ್ನುವ ಉದ್ದೇಶದಿಂದ ಮಾಡುತ್ತಿವೆ. ಈಗಾಗಲೇ ಈ ನಿಟ್ಟಿನಲ್ಲಿ ಅನೇಕ ಸಲಹೆ ಮತ್ತು ಸೂಚನೆಗಳು ಬರುತ್ತಿವೆ. ಉದಾಹರಣೆಗೆ ತಮ್ಮ ಗಮನಕ್ಕೆ ತರುವುದಾದರೆ, ಕಳೆದ ವರ್ಷದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದವರು ಸುಮಾರು ಎಂಟು ಕೋಟಿ ರೂಪಾಯಿಗಳ ಒಂದು ಪ್ರಾಜೆಕ್ಟ್‌ನ್ನು ಈ ಸ್ಕೀಮ್‌ನಲ್ಲಿ ಮಾಡಿಕೊಂಡಿದ್ದಾರೆ. ಪ್ರಾಥಮಿಕ ಶಿಕ್ಷಣ ಹಾಗೂ ಪ್ರೌಢ ಶಿಕ್ಷಣಕ್ಕೆ ಆದ್ಯತೆ ಕೊಡಬೇಕು ಎನ್ನುವ ಏನು ಕಮಿಟ್‌ಮೆಂಟ್ ಇದೆ, ಇದಕ್ಕೆ ಒತ್ತು ಕೊಡಬೇಕು ಎನ್ನುವ ದೃಷ್ಟಿಯಿಂದ ಇದಕ್ಕೆ 15 ಪರ್ಸೆಂಟ್ ಕಡಮೆ ಮಾಡಿರುವುದು. ಇದೇ ಹಣವನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಒದಗಿಸಬೇಕು ಎನ್ನುವ ತೀರ್ಮಾನಕ್ಕೆ ಬಂದಿದ್ದೇವೆ.

ಶ್ರೀ ಎನ್.ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಬಹುಶಃ 1986-87 ಅಥವಾ 1987-88ರವರೆಗೆ ಸರ್ಕಾರ ಅನುದಾನ ಕೊಡುವಂಥ ಪದ್ದತಿ ಇತ್ತು. ಇವತ್ತು ಅನೇಕ ಅನುದಾನ ರಹಿತ ಉತ್ತಮ ಕಾಲೇಜುಗಳು ಅಸ್ತಿತ್ವದಲ್ಲಿವೆ. ವಿಶೇಷವಾಗಿ ಮಹಿಳೆಯರಿಗೆ ವಿದ್ಯಾಭ್ಯಾಸ ಕೊಡುವ ಅನೇಕ ಕಾಲೇಜುಗಳು ಇವೆ. ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರೇಣುಕಾಚಾರ್ಯ ಕಾಲೇಜಿಗೆ ಮಾನ್ಯ ಶಿಕ್ಷಣ ಸಚಿವರು ಕೂಡ

ಭೇಟಿ ನೀಡಿದ್ದರು. ಇದು ಬಹಳ ಉತ್ತಮವಾದ ಕಾಲೇಜು. ಅಲ್ಲಿ ಕೂಡ ಅಲ್ಲಿನ ಶಿಕ್ಷಕರು ಉತ್ತಮವಾದ ಶಿಕ್ಷಣವನ್ನು ನೀಡುತ್ತಿದ್ದಾರೆ. ವಿಶೇಷವಾಗಿ ಮಹಿಳೆಯರ ಕಾಲೇಜುಗಳು ಏನಿವೆ, ಬಡ ಮತ್ತು ಮಧ್ಯಮವರ್ಗದವರು ನಡೆಸುತ್ತಿರುವ ಮಹಿಳಾ ಕಾಲೇಜುಗಳಿಗೆ ಅನುದಾನ ಕೊಡುವುದಕ್ಕೆ ಸರ್ಕಾರ ವಿಶೇಷವಾದ ಯೋಜನೆಯನ್ನು ಹಾಕಿಕೊಂಡಿದಿಯೇ? ಈ ನಿಟ್ಟಿನಲ್ಲಿ ಸರ್ಕಾರ ಏನಾದರೂ ಯೋಚಿಸಿದಿಯೇ?

ಡಾ: ಜಿ.ಪರಮೇಶ್ವರ್: ಸರ್ಕಾರ ಕಾಲೇಜುಗಳನ್ನು ಮಂಜೂರು ಮಾಡುವಂಥ ಸಂದರ್ಭದಲ್ಲಿ, ಎಲ್ಲಾ ಕಾಲೇಜು ನಡೆಸುವವರಿಂದಲೇ ''ಅನುದಾನ ರಹಿತ'' ಎಂದು ಮುಚ್ಚಳಿಕೆ ಬರೆಯಿಸಿಕೊಂಡು ಮಂಜೂರಾತಿಯನ್ನು ನೀಡಿರುತ್ತದೆ. ಆದ್ದರಿಂದ ಅನುದಾನದ ಪ್ರಶ್ನೆ ಈಗ ಬರುವುದಿಲ್ಲ. ಆದರೂ ಕೂಡ ಕಾಲೇಜು ನಡೆಸುವುದಕ್ಕೆ ಹಣ ಬೇಕು ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಆದ್ದರಿಂದ ಇದು ನೀತಿಯ ಪ್ರಶ್ನೆಯಾಗಿರುವುದರಿಂದ, ಮುಂದೆ ಸರ್ಕಾರ ಅನುದಾನ ಕೊಡಬೇಕು ಎನ್ನುವ ನೀತಿಯನ್ನು ಮಾಡುವಂಥ ಸಂದರ್ಭದಲ್ಲಿ, ಅವರಿಗಿರುವಂಥ ಮೂಲಭೂತ ಸೌಲಭ್ಯ, ವಿದ್ಯಾರ್ಥಿಗಳ ಸಂಖ್ಯೆ, ಹಾಗೂ ಇದಕ್ಕಿರುವ ಪ್ರೈವೇಟ್ ಪ್ರೊಫಾರ್ಮ್ ಏನಿದೆ ಅದನ್ನು ನೋಡಿಕೊಂಡು ಆದ್ಯತೆಯ ಮೇಲೆ ಆ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಶ್ರೀನಿವಾಸ ಗೌಡ: ಮಾನ್ಯ ಅಧ್ಯಕ್ಷರೆ, ಇವತ್ತು ಉನ್ನತ ಶಿಕ್ಷಣದ ಪ್ರಾಧನ್ಯ ಹೆಚ್ಚಾಗಿದೆ. ಹೀಗಿರುವಾಗ ಶೇಕಡ 15ರಷ್ಟು ಹಣ ಕಡಿಮೆ ಮಾಡಿರುವುದನ್ನು ನೋಡಿದರೆ ಹಿಂಬದಿಯಿಂದ ಖಾಸಗೀಕರಣಕ್ಕೆ ಪ್ರೋತ್ಸಾಹ ಕೊಡುತ್ತಿದ್ದೇವೆ ಎನ್ನುವ ಸೂಚನೆ ಕಾಣುತ್ತಿದೆ. ಉದಾಹರಣೆಗೆ ಹೇಳುವುದಾದರೆ, ಕೋಲಾರದಲ್ಲಿ ಐದು ವರ್ಷಗಳ ಹಿಂದೆ ಒಂದು ಕಾನೂನು ಕಾಲೇಜು ಪ್ರಾರಂಭವಾಯಿತು, ಇವತ್ತಿನವರೆಗೂ ಇದಕ್ಕೆ ಕಟ್ಟಡ ಇಲ್ಲ. ಆಯವ್ಯಯದಲ್ಲಿ ಇದಕ್ಕೆ ಕೇವಲ 25 ಕೋಟಿ ರೂಪಾಯಿಗಳನ್ನು ಇಟ್ಟುಕೊಂಡು ಇಡೀ ರಾಜ್ಯದಲ್ಲಿ ಏನು ಮಾಡುವುದಕ್ಕಾಗುತ್ತದೆ? ಮಾನ್ಯ ಮುಖ್ಯಮಂತ್ರಿಗಳಿಗೆ ಈ ಬಗ್ಗೆ ನೀವು ತಿಳಿಸಿ ಹೆಚ್ಚಿನ ಹಣ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ, ಎಲ್ಲೆಲ್ಲಿ ಕಟ್ಟಡ ಇಲ್ಲವೋ ಅವುಗಳನ್ನು ಸರಿಪಡಿಸಬೇಕಾಗುತ್ತದೆ. ಈ ಉನ್ನತ ಶಿಕ್ಷಣಕ್ಕೆ ಹಣ ಕಡಿಮೆ ಮಾಡಿದರೆ ಸಮಾಜದ ಮೇಲೆ ಒಂದು ದೊಡ್ಡ ಘಾತಕತನವಾಗುತ್ತದೆ. ಏಕೆಂದರೆ, ಸರ್ಕಾರಿ ಕಾಲೇಜುಗಳಿಗೆ ಹಣವನ್ನು ಒದಗಿಸದೇ, ಒಳ್ಳೆಯ ಪಾಠಪ್ರವಚನದ ವ್ಯವಸ್ಥೆ ಮಾಡದೇ ಹೋದರೆ ಆಟೋಮೆಟಿಕ್ ಆಗಿ ಖಾಸಗಿಯವರು ಮುಂದೆ ಬಂದು ಒಳ್ಳೆಯ ಕಾಲೇಜುಗಳನ್ನು ತೆರೆದು, ತಾವು ತೆಗೆದುಕೊಳ್ಳುವ ಫೀಜ್ ಕೂಡ ಹೆಚ್ಚು ಮಾಡುತ್ತಾರೆ. ಆದ್ದರಿಂದ, ಇದಕ್ಕೇನು ಹಣ ಕಡಿಮೆ ಮಾಡಿದ್ದಾರೆ ಇದನ್ನು ಬದಲಾಯಿಸಿ ಹಣ ಹೆಚ್ಚು ಮಾಡಬೇಕು ಹಾಗೂ ಕೋಲಾರದಲ್ಲಿರುವ ಲಾ ಕಾಲೇಜ್‌ಗೆ ಇಲ್ಲಿಯವರೆಗೂ ಕಟ್ಟಡ ಇಲ್ಲದೆ ಇರುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಸರ್ಕಾರಿ ಕಾಲೇಜುಗಳ ಶಿಕ್ಷಕರ ಸಂಖ್ಯೆ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ಶಿಕ್ಷಕರ ಸಂಖ್ಯೆ 11,209 ಎಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ತಿಳಿಸಿರುತ್ತಾರೆ. ಇದರಲ್ಲಿ ಏನಾದರೂ ಹುದ್ದೆಗಳು ಖಾಲಿ ಇವೆಯೇ? ಖಾಲಿ ಇದ್ದರೆ ಯಾವಾಗ ಭರ್ತಿ ಮಾಡುತ್ತೀರಿ? ಇದರಲ್ಲಿ ರೋಸ್ಟರ್ ಪದ್ಧತಿಯನ್ನು ತಾವು ಏನಾದರೂ ಅಳವಡಿಸಿಕೊಂಡಿದ್ದೀರಾ? ಇದರ ಬಗ್ಗೆ ತಾವು ವಿವರಣೆ ನೀಡಬೇಕು.

ಡಾ: ಜಿ.ಪರಮೇಶ್ವರ್: ನಮ್ಮ ಇಲಾಖೆಯಲ್ಲಿ ಸುಮಾರು 960 ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಇವುಗಳನ್ನು ನೇಮಕ ಮಾಡಬೇಕೇ ಬೇಡವೇ ಎನ್ನುವ ಪ್ರಶ್ನೆ ನಮ್ಮ ಮುಂದಿದೆ. ಇದಕ್ಕೇನು ಕಾರಣ ಏನೆಂದರೆ. ಇಡೀ ರಾಜ್ಯದಲ್ಲಿ ಸುಮಾರು 41 ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಬಹಳಷ್ಟು ಕಡಿಮೆಯಾಗಿದೆ. ಅಂದರೆ, ಮೂರು ಜನ ವಿದ್ಯಾರ್ಥಿಗಳಿರುವ ಪ್ರಥಮ ದರ್ಜೆ ಕಾಲೇಜು ಇದೆ, ಏಳು ಜನ ವಿದ್ಯಾರ್ಥಿಗಳಿರುವ ಪ್ರಥಮ ದರ್ಜೆ ಕಾಲೇಜು ಇದೆ. ಅಂದರೆ ಸುಮಾರು 15 ಜನ ಅಧ್ಯಾಪಕರು ಇರುವ ಕಾಲೇಜುಗಳಲ್ಲಿ ಮೂರು ಏಳು ಜನ ವಿದ್ಯಾರ್ಥಿಗಳಿರುವ ಕಾಲೇಜುಗಳು ಕೆಲವು ಇವೆ. ಈ ಕಾರಣಕ್ಕಾಗಿ ನೇಮಕಾತಿ ಮಾಡುತ್ತಿಲ್ಲ. ಆದ್ದರಿಂದ, ಇಂಥ ಕಾಲೇಜುಗಳಲ್ಲಿರುವ ಉಪನ್ಯಾಸಕರನ್ನು ಹೆಚ್ಚು ವಿದ್ಯಾರ್ಥಿಗಳಿರುವ ಕಾಲೇಜುಗಳಿಗೆ ಅವರನ್ನು ವರ್ಗಾ ಮಾಡಿ ನಂತರ ಉಳಿದ ಹುದ್ದೆಗಳನ್ನು ತುಂಬುವುದಕ್ಕೆ ನಾವು ವ್ಯವಸ್ಥೆ ಮಾಡಿಕೊಳ್ಳುತ್ತೇವೆ. ಕೋಲಾರದಲ್ಲಿರುವ ಲಾ ಕಾಲೇಜಿನ ಕಟ್ಟಡದ ಬಗ್ಗೆ ಮಾನ್ಯ ಸದಸ್ಯರು ಕೇಳಿದರು, ಇದರ ಬಗ್ಗೆ ಖಂಡಿತವಾಗಿ ಅಗತ್ಯವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎನ್.ಎನ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಶಿಕ್ಷಣ ಸಚಿವರು ಒದಗಿಸಿರುವ ಉತ್ತರವನ್ನು ನೋಡಿದಾಗ ಖಾಸಗಿ ಕಾಲೇಜುಗಳಲ್ಲಿ ಹೆಚ್ಚಿನ ಶಿಕ್ಷಕರು ಇದ್ದಾರೆ ಎಂಬುದು ಗೊತ್ತಾಗುತ್ತದೆ. ಖಾಸಗಿ ಕಾಲೇಜುಗಳು ಹೆಚ್ಚಾಗಿ ಇರುವುದೇ ಉತ್ತರ ಕರ್ನಾಟಕದಲ್ಲಿ. ಅಂದರೆ, ತಾವು 15 ಪರ್ಸೆಂಟ್ ಕಟ್ ಮಾಡುವುದರಿಂದ ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗುವುದು ತಮ್ಮ ಗಮನಕ್ಕೆ ಬಂದಿದೆಯೇ?

ಡಾ: ಜಿ.ಪರಮೇಶ್ವರ್: ಇದು ಇಡೀ ರಾಜ್ಯಕ್ಕೆ ಸಂಬಂಧಿಸಿದ್ದು, ಉತ್ತರ ಕರ್ನಾಟಕ ಅಥವಾ ದಕ್ಷಿಣ ಕರ್ನಾಟಕಕ್ಕೆ ನಾವು ಮಾಡಿದ್ದೇವೆಂದು ಹೇಳುವಂಥದ್ದಲ್ಲ. ಇಡೀ ಶಿಕ್ಷಣ ಕ್ಷೇತ್ರದಲ್ಲಿ ಅದರಲ್ಲೂ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆ ತರುವ ಹಿನ್ನೆಲೆಯಲ್ಲಿ ಈ ಕ್ರಮವನ್ನು ತೆಗೆದುಕೊಂಡಿದ್ದೇವೆ. ಇಲ್ಲಿ ಯಾರಿಗೂ ಯಾವುದೇ ರೀತಿಯ ಅನ್ಯಾಯವಾಗದ ಹಾಗೆ ನೋಡಿಕೊಳ್ಳುತ್ತೇವೆ

ಶ್ರೀ ಎನ್.ಯೋಗೀಶ್‌ಭಟ್: ಮಾನ್ಯ ಅಧ್ಯಕ್ಷರೆ, ಮಂಗಳೂರು ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟಂತೆ ಕೇಂದ್ರಸರ್ಕಾರದ ಹೆಚ್.ಆರ್.ಡಿ. ಸಹಾಯದಿಂದ ವಿಶೇಷವಾಗಿ ಯುವಕ ಪಿ.ಜಿ.ಕೋರ್ಸ್‌ನ್ನು ಆರಂಭ ಮಾಡುವುದಕ್ಕೆ ನೇರವಾಗಿ ರಷ್ಯ ದೇಶದ ಸಹಕಾರ ಕೂಡ ದೊರಕುವುದರಿಂದ ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರ ಅನುಮತಿ ಕೊಡುವುದಕ್ಕೆ ಸಾಧ್ಯವಾಗುತ್ತದೆಯೆ?

ಡಾ: ಜಿ.ಪರಮೇಶ್ವರ್: ಈ ವಿಷಯದ ಬಗ್ಗೆ ಸರ್ಕಾರಕ್ಕೆ ಪ್ರಸ್ತಾಪ ಬಂದ ಮೇಲೆ ಅದನ್ನು ಪರಿಶೀಲನೆ ಮಾಡಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ.

ವೈದ್ಯಕೀಯ ಕಾಲೇಜುಗಳ ಪರೀಕ್ಷೆಗಳಲ್ಲಿ ಅವ್ಯವಹಾರ.

308(3085)

ಶ್ರೀ ಚಂದ್ರಶೇಖರಪ್ಪ. ಹೆಚ್.ಎಂ.(ಶಿವಮೊಗ್ಗ) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾಸಗಿ ವೈದ್ಯಕೀಯ ಕಾಲೇಜು ಪರೀಕ್ಷೆಗಳಲ್ಲಿ ಅವ್ಯವಹಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದನ್ನು ತಡೆಗಟ್ಟಲು ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ?

ಶ್ರೀಮತಿ ನಫೀಸ್ ಫಜಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು):

ಅ) ಹೌದು.

ಆ) ಪರೀಕ್ಷೆಗಳಲ್ಲಿ ಅಕ್ರಮಗಳನ್ನು ತಡೆಯಲು ಈ ಕೆಳಕಂಡ ಕ್ರಮಗಳನ್ನು ಹಮ್ಮಿಕೊಂಡಿದೆ:

ಅ) ಪರೀಕ್ಷಕರ ನೇಮಕಾತಿಯಲ್ಲಿ ಆಗಿಂದಾಗ್ಗೆ ಬದಲಾವಣೆ ಮಾಡುತ್ತಿದೆ,

ಆ) ಮೌಖಿಕವಾಗಿ ಮತ್ತು ಬರವಣಿಗೆಯ ಮೂಲಕ ಬಂದ ದೂರುಗಳನ್ನು ಪರಿಶೀಲಿಸಿ ಪರೀಕ್ಷಕರನ್ನು ಕರ್ತವ್ಯದಿಂದ ವಿಮುಕ್ತಿಗೊಳಿಸಲಾಗುತ್ತಿದೆ.

ಇ) ಅಕ್ರಮಗಳು ಬಗ್ಗೆ ತನಿಖಾ ಸಮಿತಿಯನ್ನು ವಿಶ್ವವಿದ್ಯಾಲಯವು ರಚಿಸಿದೆ.

ವಿಶ್ವವಿದ್ಯಾಲಯದ ಪರೀಕ್ಷಾ ಕೈಪಿಡಿಯ ಅನ್ವಯ ಪರೀಕ್ಷೆ ಅವ್ಯವಹಾರಗಳ ಬಗ್ಗೆ ಬಂದ ದೂರುಗಳನ್ನು ಪರಿಶೀಲಿಸಲು ಅವ್ಯವಹಾರಗಳು ವಿಚಾರಣಾ ಸಮಿತಿಗೆ